ಕರ್ನಾಟಕ ಸರ್ಕಾರ

ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ

ವಾರ್ತಾ ಸೌಧ, ಸಂಖ್ಯೆ 17, ಭಗವಾನ್ ಮಹಾವೀರ ರಸ್ತೆ, ಬೆಂಗಳೂರು – 560 001.

---

ಸಂಖ್ಯೆ : ವಾಇ : ಜಂ ನಿ : ಸುಮಪ : 2021–22 ದಿನಾಂಕ : 29–10–2021

# ಪತ್ರಿಕಾ ಪ್ರಕಟಣೆ

**PRESS RELEASE**

## ಪವರ್ ಸ್ಟಾರ್ ಪುನೀತ್ ರಾಜ್ ಕುಮಾರ್ ನಿಧನಕ್ಕೆ ಗೌರವಾನ್ವಿತ ರಾಜ್ಯಪಾಲರ ಸಂತಾಪ

ಬೆಂಗಳೂರು ಅಕ್ಟೋಬರ್ 29(ಕರ್ನಾಟಕ ವಾರ್ತೆ):

ಪವರ್ ಸ್ಟಾರ್ ಪುನೀತ್ ರಾಜ್ ಕುಮಾರ್ ಅವರ ನಿಧನಕ್ಕೆ ಗೌರವಾನ್ವಿತ ರಾಜ್ಯಪಾಲರಾದ ಶ್ರೀ ಥಾವರ್ ಚಂದ್ ಗೆಹ್ಲೋಟ್ ಅವರು ಸಂತಾಪ ಸೂಚಿಸಿದ್ದಾರೆ. ಕನ್ನಡ ಚಿತ್ರರಂಗದ ಸೂಪರ್ ಸ್ಟಾರ್ ಪುನೀತ್ ರಾಜ್ ಕುಮಾರ್ ಅವರು ನಿಧನರಾದ ಸುದ್ದಿ ಕೇಳಿ ತೀವ್ರ ದುಃಖವಾಗಿದೆ. ಇವರ ಅಗಲಿಕೆಯಿಂದ ಕನ್ನಡ ಚಿತ್ರರಂಗಕ್ಕೆ ತುಂಬಲಾರದ ನಷ್ಟವಾಗಿದೆ. ದೇವರು ಅವರಿಗೆ ಚಿರಶಾಂತಿ ಕರುಣಿಸಲಿ. ಅವರ ಕುಟುಂಬಸ್ಥರು ಹಾಗೂ ನಾಡಿನ ಜನತೆಗೆ ಈ ದುಃಖವನ್ನು ಭರಿಸುವ ಶಕ್ತಿ ಆ ಭಗವಂತ ಕರುಣಿಸಲಿ ಎಂದು ಪ್ರಾರ್ಥಿಸುತ್ತೇನೆ ಎಂದು ಟ್ವೀಟ್ ಮಾಡುವ ಮೂಲಕ ಗೌರವಾನ್ವಿತ ರಾಜ್ಯಪಾಲರು ಸಂತಾಪ ಸೂಚಿಸಿದ್ದಾರೆ.

## ಪುನೀತ್ ರಾಜಕುಮಾರ್ ನಿಧನಕ್ಕೆ ಮುಖ್ಯಮಂತ್ರಿ ಸಂತಾಪ; ಸರ್ಕಾರಿ ಗೌರವಗಳೊಂದಿಗೆ ಅಂತ್ಯಸಂಸ್ಕಾರ

ಬೆಂಗಳೂರು ಅಕ್ಟೋಬರ್ 29(ಕರ್ನಾಟಕ ವಾರ್ತೆ):

ವರನಟ ಡಾ.ರಾಜಕುಮಾರ್ ಸುಪುತ್ರ, ಖ್ಯಾತ ನಟ ಪುನೀತ್ ರಾಜಕುಮಾರ್ ಅಕಾಲಿಕ ನಿಧನ ಹೊಂದಿರುವುದು ಅತೀವ ಆಘಾತವನ್ನುಂಟು ಮಾಡಿದೆ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ತಿಳಿಸಿದ್ದಾರೆ.

ಕಿರಿಯ ವಯಸ್ಸಿನಲ್ಲಿಯೇ ದೊಡ್ಡ ಸಾಧನೆ ಮಾಡಿದ ರಾಷ್ಟ್ರಪ್ರಶಸ್ತಿ ಪುರಸ್ಕೃತ ಜನಪ್ರಿಯ ಮೇರು ನಟ, ಯುವಜನತೆಯ ಕಣ್ಮಣಿ, ಯೂಥ್ ಐಕಾನ್ ಆಗಿದ್ದ ಪುನೀತ್ ನಿಧನ ಹೊಂದಿರುವುದು ಕಲಾರಂಗಕ್ಕೆ ಬಹಳ ದೊಡ್ಡ ನಷ್ಟ, ವಿಧಿಯ ಕ್ರೂರ ಆಟ" ಎಂದು ಮುಖ್ಯಮಂತ್ರಿಗಳು ತಿಳಿಸಿದ್ದಾರೆ.

"ವೈಯಕ್ತಿಕವಾಗಿ ಅತ್ಯಂತ ಆತ್ಮೀಯ ಸಹೃದಯ ಬಂಧುವನ್ನು ಕಳೆದುಕೊಂಡಿದ್ದೇನೆ. ಅವರ ಉತ್ಸಾಹ, ಪ್ರತಿಭೆ, ಅವರ ಅನೇಕ ಅತ್ಯುತ್ತಮ ಚಲನಚಿತ್ರಗಳನ್ನು, ಕನ್ನಡದ ಸಾಂಸ್ಕೃತಿಕ ರಾಯಭಾರಿಯಂತೆ ನಾಡಿನ ಸಮಸ್ತ ಜನತೆಯ ಮನೆ, ಮನ ತಲುಪಿದ್ದ ಅವರ ವ್ಯಕ್ತಿತ್ವವನ್ನು ಮರೆಯುವುದು ಸಾಧ್ಯವೇ ಇಲ್ಲ. ಅವರ ಆತ್ಮಕ್ಕೆ ಸದ್ಗತಿಯನ್ನು ಪ್ರಾರ್ಥಿಸುತ್ತೇನೆ."

ಅವರ ಕುಟುಂಬದವರಿಗೆ ದುಃಖ ಸಹಿಸುವ ಶಕ್ತಿಯನ್ನು ದೇವರು ನೀಡಲಿ ಎಂದು ಕೋರುತ್ತೇನೆ ಎಂದು ಮುಖ್ಯಮಂತ್ರಿಗಳು ತಮ್ಮ ಶೋಕ ಸಂದೇಶದಲ್ಲಿ ತಿಳಿಸಿದ್ದಾರೆ.

*ಸಂಯಮದಿಂದ ವರ್ತಿಸಿ: ಅಭಿಮಾನಿಗಳಿಗೆ ಮನವಿ*

ಈ ದುಃಖಕರ ಸನ್ನಿವೇಶದಲ್ಲಿ, ಭಾವಾವೇಶಕ್ಕೆ ಒಳಗಾಗಿ ಅಹಿತಕರ ಘಟನೆಗಳಿಗೆ ಅವಕಾಶ ಕೊಡಬೇಡಿ, ಶಾಂತಿ, ಸಂಯಮದಿಂದ ವರ್ತಿಸಿ ಅಂತಿಮ ನಮನಗಳನ್ನು ಸಲ್ಲಿಸೋಣ ಎಂದು ಮುಖ್ಯಮಂತ್ರಿಗಳು ಪುನೀತ್ ಅಭಿಮಾನಿಗಳಿಗೆ ಮನವಿ ಮಾಡಿದ್ದಾರೆ.

ಪುನೀತ್ ರಾಜ್ ಕುಮಾರ್ ಅವರ ಅಂತ್ಯಕ್ರಿಯೆಯ ಸಕಲ ಸರ್ಕಾರಿ ಗೌರವಗಳೊಂದಿಗೆ ನಡೆಯಲಿದೆ ಎಂದು ಮುಖ್ಯಮಂತ್ರಿಗಳು ತಿಳಿಸಿದ್ದಾರೆ.

**ರಾಜ್ಯಪಾಲರ ಅಧ್ಯಕ್ಷತೆಯಲ್ಲಿ ಜಂಟಿ ಸಭೆ**
**ಮಾತುಕತೆ ಮೂಲಕ ಸಮಸ್ಯೆ ಇತ್ಯರ್ಥಕ್ಕೆ ಸಲಹೆ**

**ಬೆಂಗಳೂರು ಅ.29 (ಕರ್ನಾಟಕ ವಾರ್ತೆ):**

ಬೇಡಿಕೆಗಳ ಈಡೇರಿಕೆಗಾಗಿ ಧರಣಿ ಮಾಡುವ ಬದಲು ಪರಸ್ಪರ ಮಾತುಕತೆ ನಡೆಸುವ ಮೂಲಕ ಸಮಸ್ಯೆಗೆ ಪರಿಹಾರ ಕಂಡುಕೊಳ್ಳಬೇಕು ಎಂದು ಗೌರವಾನ್ವಿತ ರಾಜ್ಯಪಾಲರಾದ ಥಾವರ್ ಚಂದ್ ಗೆಹ್ಲೋಟ್ ಅವರು ಸಲಹೆ ಮಾಡಿದರು.

ಇಂದು ರಾಜಭವನದ ಸ್ವಾಮಿ ವಿವೇಕಾನಂದ ಭವನದಲ್ಲಿ ಕೃಷಿ ಸಚಿವರಾದ ಬಿ.ಸಿ.ಪಾಟೀಲ್ ಮತ್ತು ಕೃಷಿ ವಿಶ್ವವಿದ್ಯಾಲಯದ ವ್ಯವಸ್ಥಾಪನಾ ಮಂಡಳಿ, ಶಿಕ್ಷಕರ ಕಲ್ಯಾಣ ಸಂಘದ ಪ್ರತಿನಿಧಿಗಳು, ರಾಜ್ಯ ಸರ್ಕಾರ ಹಾಗೂ ಯುಜಿಸಿಯ ಅಧಿಕಾರಿಗಳ ಜಂಟಿ ಸಭೆ ನಡೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಕೃಷಿ ವಿಶ್ವವಿದ್ಯಾಲಯದ ಶಿಕ್ಷಕರ ಕಲ್ಯಾಣ ಸಂಘದ ಬೇಡಿಕೆಗಳನ್ನು ಪರಿಗಣಿಸಿ, ಕಾನೂನು ಚೌಕಟ್ಟಿನಲ್ಲಿ ಅವುಗಳ ಪರಿಹಾರಕ್ಕೆ ಕ್ರಮವಹಿಸಲಾಗುವುದು. ಶಿಕ್ಷಕರು ಮುಷ್ಕರ ಕೈಗೊಳ್ಳುವ ಬದಲಾಗಿ, ಸರ್ಕಾರ ಮತ್ತು ಆಡಳಿತ ಮಂಡಳಿ ಗಮನಕ್ಕೆ ತಂದು ಹಾಗೂ ಮಾತುಕತೆ ಮೂಲಕ ಸಮಸ್ಯೆ ಬಗೆಹರಿಸಿಕೊಳ್ಳಬೇಕು ಎಂದು ಹೇಳಿದರು.

ಸಭೆಯಲ್ಲಿ ಬಡ್ತಿ, ಜೇಷ್ಠತಾ ಪಟ್ಟಿ, ಪಿಂಚಣಿ, ಇತರೆ ವಿಶ್ವವಿದ್ಯಾಲಯಗಳಲ್ಲಿ ಸಲ್ಲಿಸಿದ ಸೇವೆ ಪರಿಗಣನೆ, ನಿವೃತ್ತಿ ವಯೋಮಿತಿ  ಏರಿಕೆ, ಸೇರಿದಂತೆ ಹಲವು ಬೇಡಿಕೆಗಳ ಕುರಿತು ಶಿಕ್ಷಕರ ಕಲ್ಯಾಣ ಸಂಘದ ಡಾ.ಮಹಾಂತೇಶ ನಾಯಕ ಅವರು ಪ್ರಸ್ತಾಪಿಸಿದರು. ಸಹಾನುಭೂತಿಯಿಂದ ಬೇಡಿಕೆಗಳನ್ನು ಆಲಿಸಿದ ಘನತೆವೆತ್ತ ರಾಜ್ಯಪಾಲರು ಕೆಲವು ಬೇಡಿಕೆಗಳಿಗೆ ಸ್ಥಳದಲ್ಲೇ ಪರಿಹಾರದ ಮಾರ್ಗಗಳನ್ನು ತಿಳಿಸಿದರು. ಅಲ್ಲದೇ ಕಾನೂನಿನ ಚೌಕಟ್ಟಿನಲ್ಲಿ ಹಾಗೂ ಶಿಕ್ಷಕರ ಅನುಕೂಲವಾಗುವ ನಿಟ್ಟಿನಲ್ಲಿ ಬೇಡಿಕೆಗಳ ಈಡೇರಿಕೆಗೆ ಕ್ರಮ ಕೈಗೊಳ್ಳಲು ಸಂಬಂಧಿತ ಅಧಿಕಾರಿಗಳಿಗೆ ಸೂಚಿಸಿದರು.

ಸನ್ಮಾನ್ಯ ಕೃಷಿ ಸಚಿವರಾದ ಬಿ ಸಿ ಪಾಟೀಲ್ ಅವರು ಮಾತನಾಡಿ, ಘನತೆವೆತ್ತ ರಾಜ್ಯಪಾಲರು ಶಿಕ್ಷಕರ ಮನವಿಯನ್ನು ಪರಿಗಣಿಸಿ ಈ ಉನ್ನತ ಮಟ್ಟದ ಸಭೆ ನಡೆಸಿದ್ದಾರೆ. ಕಾನೂನಿನ ಪ್ರಕಾರ ಹಾಗೂ ಗೌರವಾನ್ವಿತ ರಾಜ್ಯಪಾಲರ ಮಾರ್ಗದರ್ಶನದಲ್ಲಿ ಸಮಸ್ಯೆ ಬಗೆಹರಿಸಲು ಪ್ರಯತ್ನಿಸಲಾಗುವುದು ಎಂದು ಹೇಳಿದರು.

ಸಭೆಯಲ್ಲಿ ತೋಟಗಾರಿಕೆ ಇಲಾಖೆಯ ಪ್ರಧಾನ ಕಾರ್ಯದರ್ಶಿಗಳಾದ ರಾಜೇಂದ್ರ ಕುಮಾರ್ ಕಟಾರಿಯಾ, ಕೃಷಿ ಇಲಾಖೆಯ ಡಾ.ರಾಜಕುಮಾರ್ ಖತ್ರಿ, ಹಣಕಾಸು ಇಲಾಖೆಯ ವಿಶೇಷ ಕಾರ್ಯದರ್ಶಿ ಪದ್ಮಾವತಿ, ಧಾರವಾಡ ಕೃಷಿ ವಿಶ್ವವಿದ್ಯಾಲಯದ ಶಿಕ್ಷಕರ ಸಂಘದ ಪ್ರತಿನಿಧಿಗಳು, ಧಾರವಾಡ ಕೃಷಿ ವಿಶ್ವವಿದ್ಯಾಲಯದ ಆಡಳಿತ ಮಂಡಳಿ ಸೇರಿದಂತೆ ಸರ್ಕಾರದ ಉನ್ನತ ಮಟ್ಟದ ಅಧಿಕಾರಿಗಳು ಉಪಸ್ಥಿತರಿದ್ದರು.

**ಈ ಹಿಂದೆ ಪರಿಹಾರ ಭರವಸೆ:**

ಅಕ್ಟೋಬರ್ 18 ರಂದು ಧಾರವಾಡದ ಕೃಷಿ ವಿಶ್ವವಿದ್ಯಾಲಯದ ಆವರಣದಲ್ಲಿ ವಿವಿ ಶಿಕ್ಷಕರ ಸಂಘ ಮುಷ್ಕರ ಕೈಗೊಂಡಿತ್ತು. ಧಾರವಾಡದ ಪ್ರವಾಸದಲ್ಲಿದ್ದ ಘನತೆವೆತ್ತ ರಾಜ್ಯಪಾಲರು ಮುಷ್ಕರ ಸ್ಥಳಕ್ಕೆ ಭೇಟಿ ನೀಡಿ ಕೃಷಿ ವಿಶ್ವವಿದ್ಯಾಲಯದ ಶಿಕ್ಷಕರ ಕಲ್ಯಾಣ ಸಂಘದ ಬೇಡಿಕೆಗಳನ್ನು ಪರಿಗಣಿಸಿ, ಕಾನೂನು ಚೌಕಟ್ಟಿನಲ್ಲಿ ಅವುಗಳ ಪರಿಹಾರಕ್ಕೆ ಕ್ರಮವಹಿಸಲಾಗುವುದು.10 ರಿಂದ 12 ದಿನಗಳ ಅವಧಿಯಲ್ಲಿ

ಉನ್ನತ ಮಟ್ಟದ ಸಭೆ ನಡೆಸಿ ಈ ಕುರಿತು ಪರಿಹಾರಕ್ಕೆ ಸೂತ್ರ ಒದಗಿಸಲಾಗುವುದು ಎಂದು ಭರವಸೆ ನೀಡಿದ್ದರು. ಈ ಸಂಬಂಧಿತ ಇಂದು ರಾಜಭವನದಲ್ಲಿ ಘನತೆವೆತ್ತ ರಾಜ್ಯಪಾಲರು ಸಭೆ ನಡೆಸಿದರು.

## ಪುನೀತ ರಾಜಕುಮಾರ ಅವರ ನಿಧನಕ್ಕೆ ಸಭಾಪತಿ ಬಸವರಾಜ ಹೊರಟ್ಟಿ ತೀವ್ರ ಸಂತಾಪ

ಬೆಂಗಳೂರು, ಅಕ್ಟೋಬರ್ 29 (ಕರ್ನಾಟಕ ವಾರ್ತೆ):

ಕನ್ನಡದ ಚಿತ್ರರಂಗದ ಉದಯೋನ್ಮುಖ ನಾಯಕ ನಟ, ಪವರ್ ಸ್ಟಾರ್ ಪುನೀತ ರಾಜಕುಮಾರ ಅವರ ಅಕಾಲಿಕ ನಿಧನಕ್ಕೆ ಕರ್ನಾಟಕ ವಿಧಾನ ಪರಿಷತ್ತಿನ ಸಭಾಪತಿ ಶ್ರೀ ಬಸವರಾಜ ಹೊರಟ್ಟಿ ತೀವ್ರ ಸಂತಾಪ ವ್ಯಕ್ತಪಡಿಸಿದ್ದಾರೆ.

ಒಬ್ಬ ಬಾಲ ನಟನಾಗಿ ಕನ್ನಡ ಚಿತ್ರ ರಂಗ ಪ್ರವೇಶಿಸಿದ ಪುನೀತ ರಾಜಕುಜಮಾರ ಅವರು, ಡಾ|| ರಾಜಕುಮಾರ ರವರಂತೆಯೇ ಕನ್ನಡ ಚಿತ್ರರಂಗದಲ್ಲಿ ಕೋಟ್ಯಾಂತರ ಅಭಿಮಾನಿಗಳನ್ನು ಹೊಂದಿದ್ದರು.
ಬಾಲ ನಟನಾಗಿ ರಾಜಕುಮಾರ ಅಭಿನಯದ 'ಬೆಟ್ಟದ ಹೂವು' ಚಲನಚಿತ್ರ ರಾಷ್ಟ್ರ ಪ್ರಶಸ್ತಿ ಪಡೆದು ಇಡೀ ಕನ್ನಡ ಚಿತ್ರರಂಗದ ಗಮನ ಸೆಳೆದದ್ದು ಇನ್ನೂ ಜನಮಾನಸದಲ್ಲಿ ಉಳಿದಿದೆ.

ನಾಯಕ ನಟನಾಗಿ ಪುನೀತ ರಾಜಕುಮಾರ ಅಭಿನಿಯಿದ್ದ 'ವೀರ ಕನ್ನಡಿಗ' 'ರಾಜಕುಮಾರ' 'ನಟಸಾರ್ವಭೌಮ' ಸೇರಿದಂತೆ ಅನೇಕ ಚಿತ್ರಗಳಲ್ಲಿಯ ಅವರ ಅದ್ಭುತ ನಟನಾ ಪ್ರತಿಭೆ ಕನ್ನಡಿಗರ ಮನಸೂರೆಗೊಂಡಿತ್ತು.

ಪುನೀತ ರಾಜಕುಮಾರ್ ಅವರ ಸಾಮಾಜಿಕ ಕಳಕಳಿ, ನೊಂದವರಿಗೆ ನೆರವು ನೀಡುವ ಮಾನವೀಯ ಗುಣಗಳು ಎಲ್ಲರಿಗೂ ಮಾದರಿಯಾಗಿವೆ.

ಪುನೀತ ರಾಜಕುಮಾರ ಅವರ ಅಕಾಲಿಕ ನಿಧನ ಸಮಸ್ತ ಚಿತ್ರರಂಗ ಮತ್ತು ಇಡೀ ಕನ್ನಡ ನಾಡಿಗೆ ತುಂಬಲಾರದ ನಷ್ಟವನ್ನುಂಟು ಮಾಡಿದೆ ಎಂದು ಕಂಬನಿ ಮಿಡಿದಿರುವ ಸಭಾಪತಿ ಬಸವರಾಜ ಹೊರಟ್ಟಿ, ಪುನೀತ ರಾಜಕುಮಾರ್ ನಿಧನದಿಂದ ಅವರ ಕುಟುಂಬಕ್ಕೆ ಮತ್ತು ಅವರ ಅಭಿಮಾನಿ ಬಳಗಕ್ಕೆ ಆಗಿರುವ ದುಃಖವನ್ನು ಭರಿಸುವ ಶಕ್ತಿಯನ್ನು ಭಗವಂತ ನೀಡಲಿ ಎಂದು ಪ್ರಾರ್ಥಿಸಿದ್ದಾರೆ.

## ಸಂತಾಪ ಸಂದೇಶ

ಬೆಂಗಳೂರು, ಅಕ್ಟೋಬರ್ 29 (ಕರ್ನಾಟಕ ವಾರ್ತೆ):

ಕನ್ನಡ ಚಿತ್ರರಂಗದಲ್ಲಿ ಪವರ್ ಸ್ಟಾರ್ ಎಂದೇ ಖ್ಯಾತರಾಗಿದ್ದ, ಚಿಕ್ಕಮಗಳೂರಿನ ಅಳಿಯ ಪುನೀತ್ ರಾಜ್‌ಕುಮಾರ್ ಅವರ ಅಕಾಲಿಕ ನಿಧನ ಸುದ್ದಿ ತಿಳಿದು ಅತೀವ ದುಃಖ ಉಂಟಾಗಿದೆ.

ಅವರ ಕುಟುಂಬಕ್ಕೆ ಹಾಗೂ ಲಕ್ಷಾಂತರ ಅಭಿಮಾನಿಗಳಿಗೆ ದುಃಖವನ್ನು ಭರಿಸುವ ಶಕ್ತಿಯನ್ನು ಜಗನ್ಮಾತೆ ಶ್ರೀ ದೇವಿರಮ್ಮ ಹಾಗೂ ಉಡುಪಿ ಶ್ರೀ ಕೃಷ್ಣ ದಯಪಾಲಿಸಲಿ ಎಂದು ಕೇಂದ್ರ ಕೃಷಿ ಹಾಗೂ ರೈತರ ಕಲ್ಯಾಣ ರಾಜ್ಯ ಸಚಿವೆ ಹಾಗೂ ಉಡುಪಿ ಚಿಕ್ಕಮಗಳೂರು ಕ್ಷೇತ್ರದ ಸಂಸದೆ ಶೋಬಾ ಕರಂದ್ಲಾಜೆ ಅವರು ಸಂತಾಪ ವ್ಯಕ್ತಪಡಿಸಿದ್ದಾರೆ.

## ನಗರಾಭಿವೃದ್ಧಿ ಸಚಿವರ ಪ್ರವಾಸ

ಬೆಂಗಳೂರು, ಅಕ್ಟೋಬರ್ 29 (ಕರ್ನಾಟಕ ವಾರ್ತೆ):

ನಗರಾಭಿವೃದ್ಧಿ ಹಾಗೂ ದಾವಣಗೆರೆ ಜಿಲ್ಲಾ ಉಸ್ತುವಾರಿ ಸಚಿವ ಬಿ.ಎ. ಬಸವರಾಜ (ಬೈರತಿ) ಅವರು ಅಕ್ಟೋಬರ್ 31 ಹಾಗೂ ನವೆಂಬರ್ 01ರಂದು ಕೊಡಗು ಮತ್ತು ದಾವಣಗೆರೆ ಜಿಲ್ಲೆಗಳಲ್ಲಿ ಪ್ರವಾಸ ಕೈಗೊಂಡು ಅಂದೇ ಕೇಂದ್ರಸ್ಥಾನಕ್ಕೆ ಹಿಂದಿರುಗುವರು ಎಂದು ಅಧಿಕೃತ ಪ್ರಕಟಣೆ ತಿಳಿಸಿದೆ.

## ವಸತಿ ಸಚಿವರ ಪ್ರವಾಸ

ಬೆಂಗಳೂರು, ಅಕ್ಟೋಬರ್ 29 (ಕರ್ನಾಟಕ ವಾರ್ತೆ):

ವಸತಿ ಹಾಗೂ ಮೂಲಸೌಲಭ್ಯ ಅಭಿವೃದ್ಧಿ ಸಚಿವ ವಿ.ಸೋಮಣ್ಣ (ಬೈರತಿ) ಅವರು ಅಕ್ಟೋಬರ್ 31 ರಂದು ದಾವಣಗೆರೆ ಜಿಲ್ಲೆಗಳಲ್ಲಿ ಪ್ರವಾಸ ಕೈಗೊಂಡು ಅಂದೇ ಕೇಂದ್ರಸ್ಥಾನಕ್ಕೆ ಹಿಂದಿರುಗುವರು ಎಂದು ಅಧಿಕೃತ ಪ್ರಕಟಣೆ ತಿಳಿಸಿದೆ.

## ಬೃಹತ್ ವಾಹನಗಳ ಜಾಥಾಗೆ ಚಾಲನೆ

ಬೆಂಗಳೂರು, ಅಕ್ಟೋಬರ್ 29 (ಕರ್ನಾಟಕ ವಾರ್ತೆ):

ಕರ್ನಾಟಕ ರಾಜ್ಯ ಕಾನೂನು ಸೇವೆಗಳ ಪ್ರಾಧಿಕಾರ ಹಾಗೂ ಉಚ್ಚನ್ಯಾಯಾಲಯ ಕಾನೂನು ಸೇವಾ ಸಮಿತಿ ಬೆಂಗಳೂರು ಇವರ ಸಹಯೋಗದೊಂದಿಗೆ ಕಾನೂನಿನ ಬಗ್ಗೆ ಅರಿವು ಮೂಡಿಸಲು ಹೈಕೋರ್ಟ್ ಆವರಣದಲ್ಲಿ ಇಂದು ಹಮ್ಮಿಕೊಳ್ಳಲಾಗಿದ್ದ "ಬೃಹತ್ ವಾಹನಗಳ ಜಾಥಾಕ್ಕೆ" ರಾಜ್ಯ ಉಚ್ಚನ್ಯಾಯಾಲಯದ ಮುಖ್ಯ ಗೌರವಾನ್ವಿತ ನ್ಯಾಯಮೂರ್ತಿಗಳಾದ ರಿತು ರಾಜ್ ಅವಸ್ತಿ ಅವರು ಚಾಲನೆ ನೀಡಿದರು.

ಕಾರ್ಯಕ್ರಮದಲ್ಲಿ ಹೈಕೋರ್ಟ್ ನ್ಯಾಯಾಧೀಶರುಗಳಾದ ಬಿ.ವೀರಪ್ಪ, ಪಿ.ಎಸ್. ದಿನೇಶ್ ಕುಮಾರ್, ಶ್ರೀಮತಿ ಸ್ಮಜಾತ, ಕೆ.ಸೋಮಶೇಖರ್, ಶ್ರೀನಿವಾಸ ಹರೀಶ್ ಕುಮಾರ್, ಅಲೋಕ್ ಅರಾದೆ, ಜಿ.ನರೇಂದ್ರ, ಕೆ.ಎಸ್. ಮುದಾಗಳ ಉಪಸ್ಥಿತರಿದ್ದರು.

## ಶ್ರೀ ಚಾಮರಾಜೇಂದ್ರ ಮೃಗಾಲಯ, ಸಾರ್ವಜನಿಕರ ವೀಕ್ಷಣೆಗೆ ಅವಕಾಶ

**ಬೆಂಗಳೂರು, 29ನೇ ಅಕ್ಟೋಬರ್ 2021(ಕರ್ನಾಟಕ ವಾರ್ತೆ):**

**ಕನ್ನಡ ರಾಜ್ಯೋತ್ಸವದ ಪ್ರಯುಕ್ತ ಪ್ರವಾಸಿಗರು, ಜನಸಾಮಾನ್ಯರು ಹಾಗೂ ಸ್ಥಳೀಯರಿಗೆ ಮೃಗಾಲಯವನ್ನು ವೀಕ್ಷಿಸಲು ಅನುವಾಗುವಂತೆ 2ನೇ ನವೆಂಬರ್ 2021ರ ಮಂಗಳವಾರದಂದು ಶ್ರೀ ಚಾಮರಾಜೇಂದ್ರ ಮೃಗಾಲಯ ಹಾಗೂ ಕಾರಂಜಿಕೆರೆ ಪ್ರಕೃತಿ ಉದ್ಯಾನವನ್ನು ಸಾರ್ವಜನಿಕರ ವೀಕ್ಷಣೆಗೆ ತೆರೆಯಲಾಗುವುದು ಎಂದು ಅಧಿಕೃತ ಪ್ರಕಟಣೆ ತಿಳಿಸಿದೆ.**

## ಚಿತ್ರಕಲಾ ಶಿಕ್ಷಕರು ಹಾಗೂ ನಿಲಯ ಮೇಲ್ವಿಚಾರಕರ ತಾತ್ಕಾಲಿಕ ಮತ್ತು ಅಂತಿಮ ಆಯ್ಕೆ ಪ್ರಕಟ

**ಬೆಂಗಳೂರು, 29ನೇ ಅಕ್ಟೋಬರ್ 2021(ಕರ್ನಾಟಕ ವಾರ್ತೆ):**

ಕರ್ನಾಟಕ ಲೋಕಸೇವಾ ಆಯೋಗವ ವಿವಿಧ ವೃಂದದ ಹುದ್ದೆಗಳ ನೇಮಕಾತಿಗಳ ಸಂಬಂಧ ತಾತ್ಕಾಲಿಕ ಮತ್ತು ಅಂತಿಮ ಆಯ್ಕೆ ಪಟ್ಟಿ ಹಾಗೂ ಕಟ್ ಆಫ್ ಅಂಕಗಳನ್ನು ಈಗಾಗಲೇ ಪ್ರಕಟಿಸಿದೆ.

ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ ವ್ಯಾಪ್ತಿಯಲ್ಲಿರುವ ಮೊರಾರ್ಜಿ ದೇಸಾಯಿ/ಕಿತ್ತೂರು ರಾಣಿ ಚೆನ್ನಮ್ಮ ವಸತಿ ಶಾಲೆಗಳಲ್ಲಿನ 'ಚಿತ್ರಕಲಾ ಶಿಕ್ಷಕರು (ಪದವೀಧರರಿಗೆ)' 182+48(ಹೈಕ) ಹುದ್ದೆಗಳು ಒಟ್ಟು 230 ತಾತ್ಕಾಲಿಕ ಹುದ್ದೆಗಳು ಮತ್ತು ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ನಿಲಯ ಮೇಲ್ವಿಚಾರಕರು (ಮಹಿಳೆ) (ಉಳಿಕೆ ಮೂಲ ವೃಂದದ 141+80 ಹೈ.ಕ) (ಗ್ರೂಪ್-ಸಿ) 221 ಹುದ್ದೆಗಳ ಅಂತಿಮ ಆಯ್ಕೆ ಪ್ರಟ್ಟಿಯನ್ನು ಪ್ರಕಟಿಸಿದೆ.

ಕರ್ನಾಟಕ ಲೋಕಸೇವಾ ಆಯೋಗದ ವೆಬ್‌ಸೈಟ್ http://kpsc.kar.nic.in/Lists ರಡಿಯಲ್ಲಿ ಅಭ್ಯರ್ಥಿಗಳು ಹುದ್ದೆಗಳ ತಾತ್ಕಾಲಿಕ ಮತ್ತು ಅಂತಿಮ ಆಯ್ಕೆಪಟ್ಟಿ ಮಾಹಿತಿಯನ್ನು ಪಡೆಯಬಹುದು. ತಾತ್ಕಾಲಿಕ ಆಯ್ಕೆ ಪಟ್ಟಿಗೆ ಕುರಿತಂತೆ ಆಕ್ಷೇಪಣೆಗಳೇನಾದರೂ ಇದ್ದಲ್ಲಿ ಪ್ರಕಟಿಸಿದ 7 ದಿನಗಳೊಳಗಾಗಿ ಕಾರ್ಯದರ್ಶಿ, ಕರ್ನಾಟಕ ಲೋಕಸೇವಾ ಆಯೋಗ, ಉದ್ಯೋಗ ಸೌಧ ಬೆಂಗಳೂರು-560001 ಇವರಿಗೆ ಸಂಬಂಧಿತ ಹುದ್ದೆಯ ಹೆಸರನ್ನು ಸ್ಪಷ್ಟವಾಗಿ ನಮೂದಿಸಿ ಲಿಖಿತ ರೂಪದಲ್ಲಿ ಸಲ್ಲಿಸಲು ಸೂಚಿಸಿದೆ. ನಂತರ ಬರುವ ಆಕ್ಷೇಪಟಣೆಗಳನ್ನು ಪರಿಗಣಿಸಲಾಗುವುದಿಲ್ಲವೆಂದು ಅಧಿಕೃತ ಪ್ರಕಟಣೆ ತಿಳಿಸಿದೆ.

## ಬೆರಳಚ್ಚುಗಾರರ ಹುದ್ದೆಗಳಿಗೆ ಅರ್ಜಿ ಆಹ್ವಾನ

**ಬೆಂಗಳೂರು, 29ನೇ ಅಕ್ಟೋಬರ್ 2021(ಕರ್ನಾಟಕ ವಾರ್ತೆ):**

**ಬೆಂಗಳೂರಿನ ಕರ್ನಾಟಕ ಉಚ್ಚ ನ್ಯಾಯಾಲಯದಲ್ಲಿ 150 ಬೆರಳಚ್ಚುಗಾರರ ಹುದ್ದೆಗಳಿಗೆ ಅರ್ಜಿಗಳನ್ನು ಆಹ್ವಾನಿಸಿದೆ.**

**ಅಭ್ಯರ್ಥಿಗಳು ಆನ್ ಲೈನ್ ಮೂಲಕ ಅರ್ಜಿಯನ್ನು ಕರ್ನಾಟಕ ಉಚ್ಚ ನ್ಯಾಯಾಲಯದ ವೆಬ್ ಸೈಟ್ https://karnatakajudiciary.kar.nic.in/recruitment.php ಮೂಲಕ ಸಲ್ಲಿಸಲು ಕೊನೆಯ ದಿನಾಂಕ 27ನೇ ನವೆಂಬರ್ 2021.**

## Applications are invited for Typist

**Bengaluru, 29th Ocober 2021( Karnataka Information):**

Online applications are invited from the eligible candidates for recruitment to the post of Typist on the Establishment of High Court of Karnataka. The last date for submission of online applications is 27th November, 2021 (11.59 p.m.). For further details please refer official website of High Court of Karnataka at www.karnatakajudiciary.kar.nic.in.

## Upalokayukta, State of Karnataka visit and inspect the Government offices

**Bengaluru, October 29, (Karnataka Information) :**

On the occasion of Vigilance Awareness Week, Hon'ble Mr. Justice B.S. Patil, Upalokayukta, State of Karnataka decided to visit and inspect the offices of Government for reviewing the work of public servants, keeping in mind the complaints received and also to create awareness among the public servants in regard to their commitment to work. In this regard Hon'ble Upalokayukta visited the following offices.

I OFFICE OF THE JOINT COMMISSIONER, WEST, MALLESHWARAM, BENGALURU

On 26/10/2021 Hon'ble Upalokayukta Justice B.S. Patil along with team of officers i.e., Sri Shanthanu Sinha, IPS, Superintendent of Police, Karnataka Lokayukta; Sri M.V. Prasad, IRSE, Chief Engineer, Karnataka Lokayukta; Sri Vijayakumar Rai, Deputy Registrar (Administration); Sri V. Jayaprakash, Asst. Registrar of Karnataka Lokayukta; Sri Shankaranarayana, Dy. Supdt. Of Police, Karnataka Lokayukta, visited the office of the Joint Commissioner, Bruhat Bengaluru Mahanagara Palike, West Zone, Malleshwaram, Bangalore, wherein the action taken by the concerned Assistant Directors of Town Planning attached to the said office As reflected in various files, are verified and following aspects were noticed.

1) The two Asst. Directors of Town Planning have taken charge pursuant to the powers delegated as per Bruhat Bengaluru Mahanagara Palike Act, 2020 with effect from 10/8/2021.
2) They stated that due to paucity of staff, they are not in a position to inspect each and every building under construction or to certify them before the commencement of construction.
3) Actions are initiated only in cases where complaint is received regarding violation of set backs or other building byelaws.
4) No case is registered on their own after physical verification of the actual violations, in the absence of any complaint.
5) As per Section 248 of the Bruhat Bengaluru Mahanagara Palike Act, read with Office order dated 12/8/2021, the Assistant Directors of Town Planning are duty bound to take action in respect of constructions of buildings in violation of building plan and building bylaws, irrespective of any complaint filed.

3. Therefore, while ordering registration of a suo-motu case against the concerned, directions were given to furnish details of applications of Building plans received, building plans sanctioned, constructions of buildings inspected by them, violations noticed by them and action taken by them to prevent the violations within 15 days.

4. The officials in charge of solid waste management in the Zone were alerted with serious consequences in case any solid waste is left unattended in the streets or in any corner of the city coming under their jurisdiction.

II. <u>OFFICE OF THE ASST. REVENUE OFFICER, BBMP, GANDHINAGAR SUB DIVISION, BENGALURU</u>

1. Thereafter, the Hon'ble Upalokayukta has visited the office of the Asst. Revenue Officer, Gandhinagar Sub Division, BBMP, Goodshed Road, Bangalore and during the inspection of the office, the records relating to transfer of khata were verified. It is noticed that in several cases, though the time limit of 30 days prescribed under the Karnataka Sakala Services Act has expired, action is not taken on transfer of Katha applications. Therefore, while ordering registration of suo-motu case against the concerned officer, they have been directed to furnish details of applications for transfer of khata received during the months of August, September and October 2021 and the time taken for processing and issuing khata certificates.

III. <u>OFFICE OF THE ADDL. COMMISSIONER, BBMP, YELAHANKA ZONE, BANGALORE</u>

On 27/10/2021, the Hon'ble Upalokayukta along with team of officers, i.e., Sri Shanthanu Sinha, IPS, Superintendent of Police, Karnataka Lokayukta; Sri M.V. Prasad, IRSE, Chief Engineer, Karnataka Lokayukta; Sri Vijayakumar Rai, Deputy Registrar (Administration); Sri V. Jayaprakash, Asst. Registrar of Karnataka Lokayukta; Sri Shankaranarayana, Dy. Supdt. Of Police, Karnataka Lokayukta, visited the office of the Addl. Commissioner, BBMP, Yelahanka Zone and verified the records relating to issuance of building licence and while ordering registration of suo-motu case, directed the Asst. Director of Town Planning to submit the details of applications of Building plans received, building plans sanctioned, constructions of buildings inspected by them, violations noticed by them and action taken by them to prevent the violations within 15 days.

2. The officials in charge of solid waste management in the Zone were alerted with serious consequences in case any solid waste is left unattended in the streets or in any corner of the city coming under their jurisdiction.

3. The Chief Engineer of Yelahanka Zone was directed to submit a report in regard to identification of potholes within Yelahanka zone, details of work started for filling up of the potholes, timeline prescribed for completion of work.

IV. <u>OFFICE OF THE ASST.REVENUE OFFICER, WARD NO. 3 & 4, YELAHANKA, BENGALURU</u>

On 27/10/2021, the Hon'ble Upalokayukta, along with team of officers i.e., Sri Shanthanu Sinha, IPS, Superintendent of Police, Karnataka Lokayukta; Sri M.V. Prasad, IRSE, Chief Engineer, Karnataka Lokayukta; Sri Vijayakumar Rai, Deputy Registrar (Administration); Sri V. Jayaprakash, Asst. Registrar of Karnataka Lokayukta; Sri Shankaranarayana, Dy. Supdt. Of Police, Karnataka Lokayukta, visited the office of the Asst. Revenue Officer, Ward No. 3 & 4, Yelahanka Sub Division, Yelahanka Bengaluru and verified the records relating to transfer of khatas. It is noticed in regard to one of the applications filed by one Smt. Lakshmi Devi B.M, that the said application was rejected on the ground that the BBMP office did not receive No objection certificate required to be furnished by the Karnataka Housing Board. There is nothing to show that after a correspondence was made on 13/9/2021 with the Assistant Executive Engineer, KHB, the matter was pursued by the Asst. Revenue Officer or the case worker to secure the no objection certificate. There is also nothing to show that the Applicant was been informed to pursue the matter with the Karnataka Housing Board to secure the required No Objection Certificate. Therefore, it emerges that for no fault of the applicant, her application has been rejected. The explanation offered by the concerned official is that, in view of the provisions contained in Karnataka SAKALA Services Act, 2011, they were required to take a decision within 30 days and accordingly, they have rejected the application and communicated the same. When the Applicant was called over phone, Applicant's husband informed that they have not received any communication regarding rejection of their application. Hence, while ordering registration of a suo-motu case against the concerned, objections were called for in regard to rejection of the above applications. Further, instructions were given to submit details of applications for change of khata received during the last three months, number of applications processed and disposed of with reasons for rejection in case of rejected applications. Further, direction has been given to submit details of applications referred to Revenue Inspectors for verification and how many of them have submitted their notes within the time prescribed and in case of non-submission of report, action taken against them.

V. OFFICE OF THE ZONAL COMMISSIONER. BBMP, SOUTH ZONE, JAYANAGAR, BENGALURU

1) On 28/10/2021, Hon'ble Upalokayukta along with team of officers i.e., Sri Shanthanu Sinha, IPS, Superintendent of Police, Karnataka Lokayukta; Sri M.V. Prasad, IRSE, Chief Engineer, Karnataka Lokayukta; Sri Mohammed Imthiyaz Ahmed

Dy. Registrar Enquiries-3; Sri Ramesh, Dy. Supdt. Of Police, Karnataka Lokayukta, Sri Kantharaju, Police Inspector, Karnataka Lokayukta, visited the Office of the Zonal Commissioner, Bruhat Bengaluru Mahanagara Palike, South Zone, Jayanagar, Bengaluru and enquired about the building licence granted, building under construction inspected by the concerned Asst. Directors of Town Planning and action taken in respect of building constructed in violation of building byelaws and sanctioned plan.

The officials in charge of solid waste management in the Zone were alerted with serious consequences in case any solid waste is left unattended in the streets or in any corner of the city coming under their jurisdiction.

The Zonal Commissioner and the Joint Commissioner were informed about the pending cases, where pending grievance of the public are required to be addressed within the timeframe. A meeting of all the officers working in the BBMP South Zone was held to create awareness among them of the duties and responsibilities and consequences that may enure due to their dereliction of duties, maladministration, misconduct, including corrupt activities. They were informed that strict action will be taken in case any instances of misconduct, maladministration, dereliction of duty or corrupt practices are noticed.

9. Tomorrow i.e., on 29/10/2021, the Hon'ble Upalokayukta is visiting the office of the Additional Commissioner, Bruhat Bengaluru Mahanagara Palike, Rajarajeshwarinagar Zone, Bengaluru.

**ಕರಾರಸಾ ನಿಗಮದ ವತಿಯಿಂದ ದೀಪಾವಳಿ ಹಬ್ಬದ ಪ್ರಯುಕ್ತ 1000 ಹೆಚ್ಚುವರಿ ವಿಶೇಷ ಸಾರಿಗೆ ವ್ಯವಸ್ಥೆ**

ಬೆಂಗಳೂರು, ಅಕ್ಟೋಬರ್ 29 (ಕರ್ನಾಟಕ ವಾರ್ತೆ):

ದೀಪಾವಳಿ ಹಬ್ಬದ ಪ್ರಯುಕ್ತ ಸಾರ್ವಜನಿಕ ಪ್ರಯಾಣಿಕರ ಅನುಕೂಲಕ್ಕಾಗಿ ಕ.ರಾ.ರ.ಸಾ.ನಿಗಮವು ಬೆಂಗಳೂರಿನಿಂದ ರಾಜ್ಯದೊಳಗಿನ ಸ್ಥಳಗಳಾದ ಧರ್ಮಸ್ಥಳ, ಕುಕ್ಕೆಸುಬ್ರಮಣ್ಯ, ಶಿವಮೊಗ್ಗ, ಹಾಸನ, ಮಂಗಳೂರು, ಕುಂದಾಪುರ, ಶೃಂಗೇರಿ, ಹೊರನಾಡು, ಮೈಸೂರು, ಮಡಿಕೇರಿ, ದಾವಣಗೆರೆ, ಹುಬ್ಬಳ್ಳಿ, ಧಾರವಾಡ, ಬೆಳಗಾವಿ, ವಿಜಯಪುರ, ಗೋಕರ್ಣ, ಶಿರಸಿ, ಕಾರವಾರ, ರಾಯಚೂರು, ಕಲಬುರಗಿ, ಬಳ್ಳಾರಿ, ಕೊಪ್ಪಳ, ಯಾದಗಿರಿ, ಬೀದರ್ ಮುಂತಾದ ಸ್ಥಳಗಳಿಗೆ ಮತ್ತು ಅಂತರರಾಜ್ಯದ ತಿರುಪತಿ, ವಿಜಯವಾಡ, ಹೈದರಾಬಾದ್, ತಿರುವನಂತಪುರಂ, ಕೊಟ್ಟಾಯಂ, ಚೆನ್ನೈ, ಕೊಯಮತ್ತೂರು, ಪೂನಾ, ಪಣಜಿ ಮುಂತಾದ ಸ್ಥಳಗಳಿಗೆ ಹಾಗೂ ವಿವಿಧ ಸ್ಥಳಗಳಿಂದ ಬೆಂಗಳೂರಿಗೆ ದಿನಾಂಕ 29.10.2021 ರಿಂದ 07.11.2021 ರವರೆಗೆ 1000 ಹೆಚ್ಚುವರಿ ವಿಶೇಷ ವಾಹನಗಳನ್ನು ಕಾರ್ಯಾಚರಣೆ ಮಾಡಲಾಗುವುದು.

ಸದರಿ ಹೆಚ್ಚುವರಿ ವಿಶೇಷ ಸಾರಿಗೆಗಳ ಪ್ರಯಾಣ ದರಗಳಲ್ಲಿ ಯಾವುದೇ ಹೆಚ್ಚಳ ಇರುವುದಿಲ್ಲ. ಕರಾರಸಾ ನಿಗಮದ ವೆಬ್‌ಸೈಟ್ www.ksrtc.karnataka.gov.in ಹಾಗೂ ಕರ್ನಾಟಕ ಮತ್ತು ಅಚಿತರ ರಾಜ್ಯದಲ್ಲಿರುವ ಗಣಕೀಕೃತ ಬುಕಿಂಗ್ ಕೌಂಟರ್‌ಗಳ ಮುಖೇನ ಈ ಸಾರಿಗೆಗಳಿಗೆ ಮುಂಗಡ ಆಸನ ಕಾಯ್ದಿರಿಸುವ ಸೌಲಭ್ಯ ಕಲ್ಪಿಸಲಾಗಿದೆ.

ಸಾರ್ವಜನಿಕ ಪ್ರಯಾಣಿಕರು ಹೆಚ್ಚುವರಿ ವಿಶೇಷ ಸಾರಿಗೆಗಳ ಸೌಲಭ್ಯವನ್ನು ಸದುಪಯೋಗ ಪಡಿಸಿಕೊಳ್ಳುವಂತೆ ಅಧಿಕೃತ ಪ್ರಕಟಣೆ ತಿಳಿಸಿದೆ.

## Operation of 1000 additional buses during Deepavali festival

**Bengaluru, October 29, (Karnataka Information) :**

In view of Deepavali festival KSRTC has planned to operate 1000 additional buses from 29.10.2021 to 07.11.2021 for the convenience of travelling public. Buses will be operated from Bengaluru to Dharmastala, Kukkesubramanya, Shivamogga, Hassan, Mangaluru, Kundapura, Sringeri, Horanadu, Mysuru, Madikere, Davangere, Hubballi, Dharwad, Belagavi, Vijayapura, Gokarna, Sirsi, Karwar, Raichur, Kalaburagi, Ballari, Koppala, Yadgir, Bidar etc., within the state and to Inter-state places such as Tirupathi, Vijayawada, Hyderabad, Thiruvananthpuram, Kottayam, Chennai, Coimbatore, Pune etc., and from different places to Bengaluru.

There will not be any hike in the passenger fares in these services. Passengers can book tickets in advance through online by logging on to KSRTC website www.ksrtc.karnataka.gov.in and through Advance Reservation counters situated in Karnataka and other States. Travelling public are requested to avail the benefit of these services.

## ಕೆ.ಎಸ್.ಆರ್.ಟಿ.ಸಿ ಯಿಂದ ಬೆಂಗಳೂರು–ಬಲಿಜಖಂಡ್ರಿಗ ಮಾರ್ಗದಲ್ಲಿ ವೇಗದೂತ ಸಾರಿಗೆಯ ಕಾರ್ಯಾಚರಣೆ

ಬೆಂಗಳೂರು, ಅಕ್ಟೋಬರ್ 29 (ಕರ್ನಾಟಕ ವಾರ್ತೆ):

ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮದ, ಬೆಂಗಳೂರು ಕೇಂದ್ರೀಯ ವಿಭಾಗದ ವತಿಯಿಂದ ಸಾರ್ವಜನಿಕ ಪ್ರಯಾಣಿಕರ ಅನುಕೂಲಕ್ಕಾಗಿ ಬೆಂಗಳೂರು (ಜಂಬೂಸವಾರಿ ದಿಣ್ಣೆ)–ಬಲಿಜಖಂಡ್ರಿಗ ವಯಾ ಚಿತ್ತೂರು ಮಾರ್ಗದ ವೇಗದೂತ ಸಾರಿಗೆಯನ್ನು ಬೆಂಗಳೂರು ನಗರದ ಜಂಬೂಸವಾರಿ ದಿಣ್ಣೆಯಿಂದ ಪ್ರಾರಂಭಿಸಿ ಪುಟ್ಟೇನಹಳ್ಳಿ, ಜಯನಗರ 4ನೇ ಬ್ಲಾಕ್, ಸೌತೆಂಡ್ ಸರ್ಕಲ್, ಮಿನರ್ವ ಸರ್ಕಲ್, ಟೌನ್‌ಹಾಲ್, ಮೈಸೂರು ಬ್ಯಾಂಕ್ & ಕೆಂಪೇಗೌಡ ಬಸ್ ನಿಲ್ದಾಣ ಮಾರ್ಗವಾಗಿ ಬಲಿಜಖಂಡ್ರಿಗಕ್ಕೆ ಹಾಗೂ ಬಲಿಜಖಂಡ್ರಿಗದಿಂದ ಬೆಂಗಳೂರಿಗೆ (ಜಂಬೂಸವಾರಿ ದಿಣ್ಣೆ) ಸದರಿ ಮಾರ್ಗವಾಗಿ ವೇಗದೂತ ಸಾರಿಗೆಯನ್ನು ದಿನಾಂಕ 29/10/2021 ರಿಂದ ಜಾರಿಗೆ ಬರುವಂತೆ ಕಾರ್ಯಾಚರಣೆ ಮಾಡಲಾಗುತ್ತಿದೆ ಎಂದು ಅಧಿಕೃತ ಪ್ರಕಟಣೆ ತಿಳಿಸಿದೆ.

KSRTC Introduction of Service on the route Bengaluru to Balijakandriga

**engaluru, October 29, (Karnataka Information) :**

Karnataka State Road Transport Corporation is introducing Express service starting from Jambusavari dinne, Puttenhalli, Jayanagar 4th block, Southend circle, Minarva circle, Townhall, Mysur bank, Kempegowda bus station Bengaluru to Balijakandriga via Chittor and back for the convenience of the travelling public w.e.f 29.10.2021.

## ಶ್ರೀ ಚಾಮರಾಜೇಂದ್ರ ಮೃಗಾಲಯ, ಸಾರ್ವಜನಿಕರ ವೀಕ್ಷಣೆಗೆ ಅವಕಾಶ

**ಬೆಂಗಳೂರು, 29ನೇ ಅಕ್ಟೋಬರ್ 2021(ಕರ್ನಾಟಕ ವಾರ್ತೆ):**

ಕನ್ನಡ ರಾಜ್ಯೋತ್ಸವದ ಪ್ರಯುಕ್ತ ಪ್ರವಾಸಿಗರು, ಜನಸಾಮಾನ್ಯರು ಹಾಗೂ ಸ್ಥಳೀಯರಿಗೆ ಮೃಗಾಲಯವನ್ನು ವೀಕ್ಷಿಸಲು ಅನುವಾಗುವಂತೆ 2ನೇ ನವೆಂಬರ್ 2021ರ ಮಂಗಳವಾರದಂದು ಶ್ರೀ ಚಾಮರಾಜೇಂದ್ರ ಮೃಗಾಲಯ ಹಾಗೂ ಕಾರಂಜಿಕೆರೆ ಪ್ರಕೃತಿ ಉದ್ಯಾನವನ್ನು ಸಾರ್ವಜನಿಕರ ವೀಕ್ಷಣೆಗೆ ತೆರೆಯಲಾಗುವುದು ಎಂದು ಅಧಿಕೃತ ಪ್ರಕಟಣೆ ತಿಳಿಸಿದೆ.

## ಲೋಕಸೇವಾ ಆಯೋಗದ ತಾತ್ಕಾಲಿಕ ಮತ್ತು ಅಂತಿಮ ಆಯ್ಕೆ ಪ್ರಕಟಣೆ

**ಬೆಂಗಳೂರು, 29ನೇ ಅಕ್ಟೋಬರ್ 2021(ಕರ್ನಾಟಕ ವಾರ್ತೆ):**

ಕರ್ನಾಟಕ ಲೋಕಸೇವಾ ಆಯೋಗವ ವಿವಿಧ ವೃಂದದ ಹುದ್ದೆಗಳ ನೇಮಕಾತಿಗಳ ಸಂಬಂಧ ತಾತ್ಕಾಲಿಕ ಮತ್ತು ಅಂತಿಮ ಆಯ್ಕೆ ಪಟ್ಟಿ ಹಾಗೂ ಕಟ್ ಆಫ್ ಅಂಕಗಳನ್ನು ಈಗಾಗಲೇ ಪ್ರಕಟಿಸಿದೆ.

ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ ವ್ಯಾಪ್ತಿಯಲ್ಲಿರುವ ಮೊರಾರ್ಜಿ ದೇಸಾಯಿ/ಕಿತ್ತೂರು ರಾಣಿ ಚೆನ್ನಮ್ಮ ವಸತಿ ಶಾಲೆಗಳಲ್ಲಿನ 'ಚಿತ್ರಕಲಾ ಶಿಕ್ಷಕರು (ಪದವೀಧರರಿಗೆ)' 182+48(ಹೈಕ) ಹುದ್ದೆಗಳು ಒಟ್ಟು 230 ತಾತ್ಕಾಲಿಕ ಹುದ್ದೆಗಳು ಮತ್ತು ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ನಿಲಯ ಮೇಲ್ವಿಚಾರಕರು (ಮಹಿಳೆ) (ಉಳಿಕೆ ಮೂಲ ವೃಂದದ 141+80 ಹೈ.ಕ) (ಗ್ರೂಪ್-ಸಿ) 221 ಹುದ್ದೆಗಳ ಅಂತಿಮ ಆಯ್ಕೆ ಪಟ್ಟಿಯನ್ನು ಪ್ರಕಟಿಸಿದೆ.

ಕರ್ನಾಟಕ ಲೋಕಸೇವಾ ಆಯೋಗದ ವೆಬ್‌ಸೈಟ್ http://kpsc.kar.nic.in/Lists ರಡಿಯಲ್ಲಿ ಅಭ್ಯರ್ಥಿಗಳು ಹುದ್ದೆಗಳ ತಾತ್ಕಾಲಿಕ ಮತ್ತು ಅಂತಿಮ ಆಯ್ಕೆಪಟ್ಟಿ ಮಾಹಿತಿಯನ್ನು ಪಡೆಯಬಹುದು. ತಾತ್ಕಾಲಿಕ ಆಯ್ಕೆ ಪಟ್ಟಿಗೆ ಕುರಿತಂತೆ ಆಕ್ಷೇಪಣೆಗಳೇನಾದರೂ ಇದ್ದಲ್ಲಿ ಪ್ರಕಟಿಸಿದ 7 ದಿನಗಳೊಳಗಾಗಿ ಕಾರ್ಯದರ್ಶಿ, ಕರ್ನಾಟಕ ಲೋಕಸೇವಾ ಆಯೋಗ, ಉದ್ಯೋಗ ಸೌಧ ಬೆಂಗಳೂರು-560001 ಇವರಿಗೆ ಸಂಬಂಧಿತ ಹುದ್ದೆಯ ಹೆಸರನ್ನು ಸ್ಪಷ್ಟವಾಗಿ ನಮೂದಿಸಿ ಲಿಖಿತ ರೂಪದಲ್ಲಿ ಸಲ್ಲಿಸಲು ಸೂಚಿಸಿದೆ. ನಂತರ ಬರುವ ಆಕ್ಷೇಪಟಣೆಗಳನ್ನು ಪರಿಗಣಿಸಲಾಗುವುದಿಲ್ಲವೆಂದು ಅಧಿಕೃತ ಪ್ರಕಟಣೆ ತಿಳಿಸಿದೆ.

## ಬೆಂಗಳೂರು ನಗರದಲ್ಲಿ ಸ್ಥಾಪಿಸಿರುವ ನಿರಂತರ ಪರಿವೇಕ್ಷಕ ವಾಯುಗುಣಮಟ್ಟ ಮಾಪನ ಕೇಂದ್ರಗಳ ವಾಯುಗುಣಮಟ್ಟ ಸೂಚ್ಯಂಕ (AQI), ಬೆಂಗಳೂರು

**ದಿನಾಂಕ: 29.10.2021 (Average of past 24 hours)**

| ಕ್ರಮ ಸಂಖ್ಯೆ | ಮಾಪನ ಕೇಂದ್ರಗಳ ಹೆಸರು | ವಾಯುಗುಣಮಟ್ಟ ಸೂಚ್ಯಂಕ (AQI) | ವರ್ಗ | ಪ್ರಮುಖ ಮಾಲಿನ್ಯಕಾರಕ |
|---|---|---|---|---|
| 1 | ಪಶುವೈದ್ಯಕೀಯಕಾಲೇಜು, ಹೆಬ್ಬಾಳ | 109 | ಸಾಧಾರಣ | $PM_{2.5}$ |
| 2 | ಜಯನಗರ 5ನೇ ಬ್ಲಾಕ್, ಶಾಲಿನಿ ಮೈದಾನ | 123 | ಸಾಧಾರಣ | $PM_{2.5}$ |
| 3 | ಕವಿಕ, ಮೈಸೂರುರಸ್ತೆ | 178 | ಸಾಧಾರಣ | $PM_{2.5}$ |
| 4 | ರಾಜೀವ್‌ಗಾಂಧಿಎದೆರೋಗಗಳ ಸಂಸ್ಥೆ, ನಿಮ್ಹಾನ್ಸ್ ಹೊಂಬೆಗೌಡನಗರ | 106 | ಸಾಧಾರಣ | $PM_{10}$ |
| 5 | ಹೆಚ್.ಎಸ್.ಆರ್ ಲೇಔಟ್, ಕೇಂದ್ರರೇಷ್ಮೆ ಮಂಡಳಿ ಹತ್ತಿರ | 107 | ಸಾಧಾರಣ | $PM_{10}$ |
| 6 | ನಗರರೈಲ್ವೆ ನಿಲ್ದಾಣ, ಮೆಜೆಸ್ಟಿಕ್, ಬೆಂಗಳೂರು | 105 | ಸಾಧಾರಣ | CO |
| 7 | ಸಾಣೆಗುರುವನಹಳ್ಳಿ, ನಿಸರ್ಗ ಭವನ, ಕರ್ನಾಟಕರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ, | 79 | ತೃಪ್ತಿಕರ | CO |
| **(29.10.2021 at 11.05 AM)** | | | | |
| 8 | BWSSB,ಕಾಡಬೀಸನಹಳ್ಳಿ | 94 | ತೃಪ್ತಿಕರ | $PM_{10}$ |
| 9 | ಪೀಣ್ಯ | * | * | * |
| 10 | ಬಿಟಿಎಂ ಲೇಔಟ್ | 127 | ಸಾಧಾರಣ | $PM_{2.5}$ |

| ವರ್ಗ(ಶ್ರೇಣಿ) | ಉಂಟಾಗಬಹುದಾದಆರೋಗ್ಯ ಪರಿಣಾಮಗಳು |
|---|---|
| **ಉತ್ತಮ (0–50)** | ಕನಿಷ್ಠ ಪರಿಣಾಮ |
| **ತೃಪ್ತಿಕರ (51–100)** | ಸೂಕ್ಷ್ಮಜನರಿಗೆ ಸಣ್ಣ ಉಸಿರಾಟದ ಅಸ್ವಸ್ಥತೆ |
| **ಸಾಧಾರಣ (101–200)** | ಶ್ವಾಸಕೋಶ, ಹೃದಯಕಾಯಿಲೆಯವರು, ಮಕ್ಕಳು ಮತ್ತು ಹಿರಿಯ ವಯಸ್ಕರಿಗೆ ಉಸಿರಾಟದ ಅಸ್ವಸ್ಥತೆ |
| **ಕಳಪೆ (201–300)** | ದೀರ್ಘಕಾಲಿಕಒಡ್ಡುವಿಕೆಯಿಂದಜನರಿಗೆ ಉಸಿರಾಟದ ಅಸ್ವಸ್ಥತೆ |
| **ಅತಿ ಕಳಪೆ (301–400)** | ದೀರ್ಘಕಾಲಿಕಒಡ್ಡುವಿಕೆಯಿಂದಜನರಿಗೆ ಶ್ವಾಸಕೋಶದಅಸ್ವಸ್ಥತೆ |
| **ತೀವ್ರ (>401)** | ಆರೋಗ್ಯವಂತಜನರಿಗೂ ಉಸಿರಾಟದ ಅಸ್ವಸ್ಥತೆ |

## AQI of the CAAQM stations established in Bengaluru City

**Date : 29.10.2021 (Average of past 24 hours)**

| Sl. No. | Station | AQI | Category | Prominent Pollutant |
|---|---|---|---|---|
| 1 | Veterinary College Hebbal | 109 | Moderate | $PM_{2.5}$ |
| 2 | Jayanagar 5th Block, Shalini ground | 123 | Moderate | $PM_{2.5}$ |
| 3 | KAVIKA, Mysore Road | 178 | Moderate | $PM_{2.5}$ |
| 4 | Rajeev Gandhi Institute of Chest Disease, NIMHANS, Hombegowda Nagar | 106 | Moderate | $PM_{10}$ |
| 5 | HSR Layout, near Central Silkboard | 107 | Moderate | $PM_{10}$ |
| 6 | City Railway Station, Magestic, Bengaluru | 105 | Moderate | CO |
| 7 | Saneguruvanahalli, NisargaBhavan, KSPCB, Shivanagara | 79 | Satisfactory | CO |
| **(29.10.2021 at 11.05 AM)** | | | | |
| 8 | BWSSB, Kadabesanahalli | 94 | Satisfactory | $PM_{10}$ |
| 9 | Peenya | * | * | * |
| 10 | BTM Layout | 127 | Moderate | $PM_{2.5}$ |

| Category (Range) | Possible Health Impacts | Category (Range) | Possible Health Impacts |
|---|---|---|---|
| Good (0–50) | Minimal Impact | Poor (201–300) | Breathing discomfort to people on prolonged exposure |
| Satisfactory (51–100) | Minor breathing discomfort to sensitive people | Very Poor (301–400) | Respiratory illness to the people on prolonged exposure |
| Moderate (101–200) | Breathing discomfort to the people with lung, Heart disease, children and older adults | Severe (>401) | Respiratory effects even on healthy people |